1318 (1360) ಶ್ರೀ ನಾಗರಾಜು, ಎಂ.ಟಿ.ಬಿ.(ಹೊಸಕೋಟೆ) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಕೋಟೆ ಟೌನ್ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರವು ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಪೂರ್ವ ಭಾವಿ ಸಿದ್ಧತೆಗಳೇನು;

ಇ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಿದ್ದಲ್ಲಿ ಇದಕ್ಕೆ ನಿಗದಿಪಡಿಸಿರುವ ಮೊತ್ತವೆಷ್ಟು;

ಈ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಆರ್.ಶ್ರೀನಿವಾಸ್ (ಪೌರಾಡಳಿತ ಸಚಿವರು) :

ಅ) ಹೌದು.

ಆ) ಹೊಸಕೋಟೆ ಪಟ್ಟಣದ ಒಳಚರಂಡಿ ಯೋಜನೆ ತಯಾರಿಸಲು ಸರ್ವೆ ಕೆಲಸ ಕೈಗೊಳ್ಳಬೇಕಾಗಿದ್ದು, ಇದಕ್ಕಾಗಿ ರೂ.7.20 ಲಕ್ಷಗಳ ಸರ್ವೆ ಅಂದಾಜನ್ನು ಮೇಲು ಸಹಿ ಹಾಗೂ ಮೊತ್ತ ಠೇವಣಿಕರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿ: 30–03–2007ರಲ್ಲಿ ಪ್ರಸ್ತಾವನೆಯನ್ನು ಪುರಸಭೆಯವರಿಗೆ ಕಳುಹಿಸಿದೆ. ಸರ್ವೆ ಮೊತ್ತವನ್ನು ಪುರಸಭೆಯವರು ಭರಿಸಿದ ನಂತರ ಸರ್ವೆ ಕೆಲಸ ಕೈಗೊಂಡು ಯೋಜನೆ ರೂಪಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1319 (1656) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಎಂಆರ್‌ಡಿಎ ವತಿಯಿಂದ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿಯ ಜ್ಯೋತಿಪುರ ಗ್ರಾಮದ ಅಕ್ಕಪಕ್ಕ ಯಾವ ಸರ್ವೆ ನಂಬರುಗಳ ಮೂಲಕ ಹಾದು ಹೋಗಲು ಈ ಹಿಂದೆ ಸಮೀಕ್ಷೆ ನಡೆಸಲಾಗಿತ್ತು. (ಸರ್ವೆ ನಂ, ವಾರು ಮತ್ತು ವಿಸ್ತೀರ್ಣವಾರು ವಿವರ ಒದಗಿಸುವುದು);